# ಶ್ರೀಮಾತೆ ಮತ್ತು ಆಧುನಿಕ ಮಹಿಳೆ

ಪ್ರವ್ರಾಜಿಕಾ ಅಮಲಪ್ರಾಣಾ

*(ಹಿಂದಿನ ಸಂಚಿಕೆಯಿಂದ ಮುಂದುವರಿದುದು)*

## ಆಧುನಿಕ ನಾರಿಯರ ಆದರ್ಶ

ಈಗ ಆಧುನಿಕ ಯುಗದ ನಾರಿಯರಿಗೆ ಶ್ರೀಮಾತೆಯವರ ಜೀವನ ಹೇಗೆ ಆದರ್ಶಪ್ರಾಯವಾಗಿದೆ ಎಂದು ನೋಡೋಣ. ಶ್ರೀಮಾತೆಯವರು ವರ್ಷಾನುಗಟ್ಟಲೆ ಶಾಲಾ ಕಾಲೇಜುಗಳಲ್ಲಿ ಓದಿ ದೊಡ್ಡ ದೊಡ್ಡ ಪದವಿಗಳನ್ನು ಕೊಡುವ ವಿದ್ಯಾಭ್ಯಾಸವನ್ನು ಮಾಡಿದವರಲ್ಲ. ಆದರೂ ಅವರಲ್ಲಿದ್ದ ಬುದ್ಧಿಮತ್ತೆ, ಸಮಯೋಚಿತ ವ್ಯವಹಾರಪ್ರಜ್ಞೆ, ಎಂತಹ ಪ್ರತಿಕೂಲ ಪರಿಸ್ಥಿತಿಯಲ್ಲಿಯೂ ಧೃತಿಗೆಡದಿರುವ ಮನೋಬಲ, ಅದೆಷ್ಟೇ ಹೊರಗಿನ ಒತ್ತಡಗಳಿದ್ದರೂ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಳ್ಳುವ ಕಲೆ, ಉದ್ವೇಗರಾಹಿತ್ಯ, ಅತ್ಯಂತ ಅಸಹಾಯಕ ಏಕಾಂಗಿತನದಲ್ಲೂ ಒಂಟಿತನದ ಖಿನ್ನತೆಯಿಂದ ಕೊರಗದ ಈಶ್ವರ ನಿರ್ಭರತೆ, ಪ್ರಶಾಂತತೆ, ಸದಾ ಸಂತುಷ್ಟತೆ, ನಿರ್ಭಯತೆ, ಎಲ್ಲರ ಮೇಲಿರುವ ಕಾಳಜಿ, ಎಲ್ಲವನ್ನೂ ತಿಳಿದುಕೊಳ್ಳುವ ಉತ್ಸಾಹ – ಇವೆಲ್ಲಕ್ಕಿಂತಲೂ ಮಿಗಿಲಾಗಿ ಮಾತೃಪ್ರೀತಿಯ ಬಾಂಧವ್ಯದಿಂದ ಸಂಸಾರದ, ಜಗತ್ತಿನ ಎಲ್ಲರನ್ನೂ ತನ್ನವರನ್ನಾಗಿ ಮಾಡಿಕೊಂಡು ಪ್ರೀತಿಯಿಂದ ನಿಯಂತ್ರಿಸುವ ವಿಶೇಷ ವಿದ್ಯೆ – ಇವುಗಳಲ್ಲಿ ಮಾತೆಯವರಂತೆ ಪಾರಂಗತರಾದವರು ಇನ್ನೊಬ್ಬರಿಲ್ಲ.

ಶ್ರೀಮಾತೆಯವರ ನಿರ್ಭಯತೆ ಆಧುನಿಕ ನಾರಿಯರಿಗೆ ಹೇಗೆ ಆದರ್ಶಪ್ರಾಯವಾಗಿದೆ ಎಂದು ನೋಡೋಣ. ಒಮ್ಮೆ ಶ್ರೀಮಾತೆಯವರು ಜಯರಾಂಬಾಟಿಯಿಂದ ದಕ್ಷಿಣೇಶ್ವರಕ್ಕೆ ಬರುವಾಗ, ಕಾಡಿನ ಮಧ್ಯದಲ್ಲಿ ಒಬ್ಬ ದರೋಡೆಕಾರನು ಎದುರಾದನು. ಶ್ರೀಮಾತೆಯವರು ಸ್ವಲ್ಪವೂ ಹೆದರಿಕೊಳ್ಳದೆ, ಅವನನ್ನು, "ಅಪ್ಪಾ" ಎಂದು ಸಂಬೋಧಿಸಿದರು. ಆತನ ಹೆಂಡತಿಯನ್ನು "ಅಮ್ಮಾ" ಎಂದು ಸಂಬೋಧಿಸಿದರು. ಮಗಳಾದ ತಮಗೆ ದಾರಿತೋರಬೇಕೆಂದು ಮನವಿ ಮಾಡಿಕೊಂಡರು. ಕಠಿಣಹೃದಯದವರಾದ ಆ ದಂಪತಿಗಳ ಹೃದಯವನ್ನು ಕರಗಿಸಿಬಿಟ್ಟರು. ನಾವಿಲ್ಲಿ ಗಮನಿಸಬೇಕಾದ ವಿಷಯವೆಂದರೆ, ಮಾತೆಯವರ ಸಾಹಸಮಯ ಚಾರಿತ್ರ್ಯ. ಇಂತಹ ಪರಿಸ್ಥಿತಿಯಲ್ಲಿ ಕಾಲೇಜುಗಳಲ್ಲಿ ಪದವೀಧರರಾದ ಆಧುನಿಕ ಮಹಿಳೆಯರೂ ಭಯಪಟ್ಟು ಮೂರ್ಛಿತರೇ ಆಗುತ್ತಿದ್ದರು. ಶ್ರೀಮಾತೆಯವರೂ ಖಂಡಿತವಾಗಿ ಭಯಪಟ್ಟಿದ್ದರು. ಆದರೆ ಸ್ವಲ್ಪವೂ ಧೃತಿಗೆಡದೆ, ಮನಸ್ಸಿನ ಸಮತೋಲನವನ್ನು ಕಳೆದುಕೊಳ್ಳದೆ, ಸಮಯೋಚಿತ ವ್ಯವಹಾರಬುದ್ಧಿಯ ಮೂಲಕ ಧೈರ್ಯದಿಂದ ಈ ಪರಿಸ್ಥಿತಿಯನ್ನು ಎದುರಿಸಿದ್ದು, ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ.

ಶ್ರೀಮಾತೆಯವರು ಶ್ರೀರಾಮಕೃಷ್ಣರ ಮಹಾಸಮಾಧಿಯ ನಂತರ ಕಾಮಾರಪುಕುರದಲ್ಲಿ ಕಳೆದ ದಿನಗಳು ತುಂಬಾ ವೇದನಾದಾಯಕವಾದುವು. ಶ್ರೀರಾಮಕೃಷ್ಣರು ಆದೇಶಿಸಿದಂತೆ ಶ್ರೀಮಾತೆ ಕಾಮಾರಪುಕುರದಲ್ಲಿದ್ದು, ಬತ್ತ ಕುಟ್ಟಿ, ಅಕ್ಕಿ ಮಾಡಿ, ಸ್ವತಃ ಸೊಪ್ಪುಗಳನ್ನು ಬೆಳೆಸಿ, ಅದರಿಂದಲೇ ಜೀವನ ಸಾಗಿಸುತ್ತಿದ್ದರು. ಒಂದೊಂದು ದಿನ ಅನ್ನದ ಜೊತೆ ಬೆರೆಸಿ ತಿನ್ನಲು ಉಪ್ಪೂ ಇರುತ್ತಿರಲಿಲ್ಲ. ಉಡುವ ಬಟ್ಟೆಯೂ ತುಂಬಾ ಹರಕಲಾಗಿ, ಅದನ್ನು ಮಧ್ಯೆ ಮಧ್ಯೆ ಗಂಟುಕಟ್ಟಿ ಉಡುತ್ತಿದ್ದರು. ಅಷ್ಟೊಂದು ಆರ್ಥಿಕ ತೊಂದರೆಯಿದ್ದರೂ ಮಾತೆಯವರು ತಮ್ಮ ಈ ದುಃಸ್ಥಿತಿಯನ್ನು ಯಾರೊಂದಿಗೂ ಹೇಳಿಕೊಳ್ಳುತ್ತಿರಲಿಲ್ಲ. ಒಂಟಿ ಜೀವನ, ವೈಧವ್ಯ, ಬಡತನ, ಹಳ್ಳಿ ಜನರ ಟೀಕೆ–ಟಿಪ್ಪಣಿಗಳು, ಸಂಬಂಧಿಕರ ದುರ್ನಡತೆ – ಹೀಗೆ ಸಾಧಾರಣವಾಗಿ ಒಬ್ಬ ಮಹಿಳೆ ತನ್ನ ಜೀವನದಲ್ಲಿ ಎದುರಿಸಬಹುದಾದ ಎಲ್ಲಾ ಕಷ್ಟಗಳನ್ನೂ ಮಾತೆಯವರು ಅನುಭವಿಸಿದ್ದರು. ಆದರೆ ಈ ಪ್ರತಿಕೂಲ ಪರಿಸ್ಥಿತಿಗಳ ಮಧ್ಯೆಯೂ ಮಾತೆಯವರು ತಮ್ಮ ದುಃಸ್ಥಿತಿಗೆ ಯಾರೊಬ್ಬರನ್ನೂ ದೂರಲಿಲ್ಲ, ಖಿನ್ನತೆಯಿಂದ ಕುಸಿಯಲಿಲ್ಲ, ಒಂಟಿತನದಿಂದ ಕೊರಗಲಿಲ್ಲ. ಶ್ರೀಮಾತೆಯವರು ಭಗವಂತನ ಮೇಲಿನ ನಿರ್ಭರತೆಯೊಂದಿಗೆ ಮನಸ್ಸಿನ ಸಮತೋಲನವನ್ನು ಕಾಪಾಡಿಕೊಂಡು, ಪ್ರಶಾಂತರಾಗಿ, ನಿರ್ವಿಕಾರದಿಂದ, ನಿರ್ಲಿಪ್ತರಾಗಿ ಜೀವನ ನಡೆಸಿರುವುದು ನಮ್ಮಂತಹ ಈ ಯುಗದ ಮಹಿಳೆಯರ ಮಾರ್ಗದರ್ಶನಕ್ಕಾಗಿಯೇ. ಮಾತೆಯವರು ತಮ್ಮ ಜೀವನದ ಸುಖದುಃಖಗಳಲ್ಲಿ ನಿರ್ಲಿಪ್ತರಾಗಿದ್ದರೂ ಬಾಹ್ಯ ಜಗತ್ತಿನ ಆಗುಹೋಗುಗಳ ಬಗ್ಗೆ ಅವರಿಗೆ ತುಂಬಾ ಕಾಳಜಿ ಇತ್ತು. ಹೊಸ ವಿಷಯಗಳನ್ನು ತಿಳಿದುಕೊಳ್ಳುವ ಕುತೂಹಲ, ಜ್ಞಾನಾಕಾಂಕ್ಷೆ ಅವರ ಜೀವನದಲ್ಲಿ ಸದಾ ಜಾಗೃತವಾಗಿತ್ತು. ಮಹಿಳೆಯೊಬ್ಬಳಿಗೆ ಅವರೊಮ್ಮೆ ಹೀಗೆ ಹೇಳಿದರು: "ನೋಡಮ್ಮ, ನೀನು ಎಲ್ಲಿದ್ದರೂ ನಿನ್ನ ಸುತ್ತಮುತ್ತ ಏನು ನಡೆಯುತ್ತಿದೆ, ಏನು ನಡೆಯುತ್ತಿಲ್ಲ ಎಂಬುದನ್ನೆಲ್ಲಾ ಗಮನಿಸಿ, ತಿಳಿಯದ್ದನ್ನು ನೋಡಿ ಪರಾಮರ್ಶಿಸಿ ತಿಳಿದುಕೊಳ್ಳಬೇಕು." ಹಾಗೆಯೇ ಮಾತೆಯವರು ಕಲಕತ್ತೆಯಲ್ಲಿದ್ದಾಗ ವಸ್ತುಸಂಗ್ರಹಾಲಯ, ಪ್ರಾಣಿಸಂಗ್ರಹಾಲಯ, ಶಿವಪುರದ ಸಸ್ಯ ಸಂಗ್ರಹಾಲಯ, ಸರ್ಕಸ್ ಮುಂತಾದವುಗಳನ್ನು ಅತ್ಯಂತ ಉತ್ಸಾಹದಿಂದ ನೋಡಿದ್ದರು.

ಈ ಆಧುನಿಕ ಯುಗದಲ್ಲಿ ಕೇವಲ ಗೃಹಿಣಿಯರಾಗದೆ, ಸಮಾಜದ ಎಲ್ಲಾ ಸ್ತರಗಳಲ್ಲೂ ವಿಷಯಗಳನ್ನು ಗ್ರಹಿಸುವ ಸದವಕಾಶ ಆಧುನಿಕ ಮಹಿಳೆಯರಿಗೆ ಇದ್ದೇ ಇದೆ. ಅದಕ್ಕಾಗಿ ಬೇಕಾದ ಗುರುತರವಾದ ಜವಾಬ್ದಾರಿಯನ್ನು ವಹಿಸಲೂ ಅವರು ಸಮರ್ಥರಾಗಿದ್ದಾರೆ. ಈ ವಿಷಯದಲ್ಲಿ ಅಂಥವರು ಶ್ರೀಮಾತೆಯವರ ಜೀವನದಿಂದ ಯಾವ ಆದರ್ಶವನ್ನು ಪಡೆಯಬಹುದು ಎಂಬುದನ್ನು ನೋಡೋಣ. ರಾಮಕೃಷ್ಣ ಮಹಾಸಂಘದ ಸ್ಥಾಪನೆಯ ಹಿಂದೆ ಇದ್ದ ಮಾತೆಯವರ ಪಾತ್ರ ಗಮನಾರ್ಹವಾದುದು. ಶ್ರೀರಾಮಕೃಷ್ಣರ ಮಹಾಪ್ರಯಾಣದ ನಂತರ ಶ್ರೀಮಾತೆಯವರು ಬುದ್ಧಗಯೆಗೆ ಹೋಗಿದ್ದಾಗ, ಅಲ್ಲಿನ ಬೌದ್ಧಮಠಗಳ ಐಶ್ವರ್ಯ, ಸುಸಂಘಟಿತವಾದ ವ್ಯವಸ್ಥೆಯನ್ನು ಕಂಡು ಶ್ರೀರಾಮಕೃಷ್ಣರ ತರುಣ ಶಿಷ್ಯರ ದುಃಸ್ಥಿತಿಯನ್ನು ನೆನೆದು, ಅವರ ಮನಸ್ಸಿಗೆ ತುಂಬಾ ವೇದನೆಯಾಯಿತು. ತಮ್ಮ ಮಕ್ಕಳನ್ನು ಸುಪ್ರತಿಷ್ಠಿತವಾದ ಸಂಘರೂಪದಲ್ಲಿ ನೋಡುವ ಹಂಬಲ ಮಾತೆಯವರ ಮನದಲ್ಲಿ ಮೂಡಿತು. ಅದಕ್ಕಾಗಿ ಅವರು ಶ್ರೀರಾಮಕೃಷ್ಣರಲ್ಲಿ ವ್ಯಾಕುಲರಾಗಿ ಪ್ರಾರ್ಥಿಸಿದರು. ವಿಶ್ವಜನನಿಯ ಈ ಅಂತರಂಗದ ಪ್ರಾರ್ಥನೆಯ ಫಲಸ್ವರೂಪವೇ ಈ ಶ್ರೀರಾಮಕೃಷ್ಣ ಮಹಾಸಂಘ. ಶ್ರೀರಾಮಕೃಷ್ಣ ಮಹಾಸಂಘವು ವಿಶ್ವಜನನಿಯ ಪ್ರೀತಿಯ ಆರೈಕೆಯಲ್ಲಿ ಪುಷ್ಟಿಕರವಾಗಿ ಬೆಳೆದು, ವಿಶಾಲ ವಟವೃಕ್ಷವಾಗಿ ತನ್ನ ಬಳಿ ಬಂದವರಿಗೆಲ್ಲಾ ಆಶ್ರಯವನ್ನು ನೀಡಿ ಸಂತೈಸುವ ಶಕ್ತಿಯನ್ನೂ, ಆಧ್ಯಾತ್ಮಿಕ ಬಲವನ್ನೂ ಪಡೆದಿದೆ. ಶ್ರೀಮಾತೆಯವರು ಸಂಘದ ಕಾರ್ಯಕಲಾಪಗಳಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸುತ್ತಿರಲಿಲ್ಲ. ಆದರೂ ಎಲ್ಲಾ ಸಮಸ್ಯೆಗಳಿಗೂ ಸಮಾಧಾನವನ್ನು ಕೊಡುವುದಲ್ಲದೇ, ಎಲ್ಲರನ್ನೂ ಒಟ್ಟುಗೂಡಿಸಿ ಶಾಂತಿ, ಸೌಹಾರ್ದತೆಯನ್ನು ನೀಡುವ ಕೌಶಲವನ್ನು ಅರಿತಿದ್ದರು. ರಾಮಕೃಷ್ಣ ಮಹಾಸಂಘದ ಇತಿಹಾಸವನ್ನು ಅತಿ ಸೂಕ್ಷ್ಮ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ರಚಿಸಿರುವ ಶ್ರೀಮತ್ ಸ್ವಾಮಿ ಗಂಭೀರಾನಂದರು ಹೀಗೆ ಬರೆಯುತ್ತಾರೆ: "ಶ್ರೀಮಾತೆಯವರು ರಾಮಕೃಷ್ಣ ಮಠದ ಸದಸ್ಯರೇನೂ ಆಗಿರಲಿಲ್ಲ. ಅವರು ಅದರ ಯಾವ ಸಮಿತಿಯಲ್ಲಿಯೂ ಇರಲಿಲ್ಲ. ಹಾಗೂ ಅವರಿಗೆ ಸಾಂವಿಧಾನಿಕವಾದ ಧ್ವನಿಯು ಎಲ್ಲಿಯೂ ಇರಲಿಲ್ಲ. ಆದರೂ ಅವರ ಮಾತೆಂದರೆ ಆದೇಶವೇ ಆಗಿತ್ತು. ಅವರ ಇಚ್ಛೆಯೆಂದರೆ ಆಜ್ಞೆಯೇ ಆಗಿತ್ತು. ಅವರ ನಿರ್ಣಯವೆಂದರೆ, ಸ್ವಾಮಿ ವಿವೇಕಾನಂದರಾಗಲಿ ಅಥವಾ ಬ್ರಹ್ಮಾನಂದರಾಗಲಿ, ಯಾರೂ ಪ್ರಶ್ನಿಸುವಂತಿರಲಿಲ್ಲ." ಅವರ ಪ್ರತಿಯೊಂದು ಮಾತನ್ನು ವೇದವಾಕ್ಯದಂತೆ ಎಲ್ಲರೂ ಸ್ವೀಕರಿಸುತ್ತಿದ್ದರು. ಆ ಶಕ್ತಿಯನ್ನು ಅವರು ಹೇಗೆ ಪಡೆದಿದ್ದರು? ಅವರ ಆಂತರಿಕವಾದ ಮತ್ತು ನಿಃಸ್ವಾರ್ಥವಾದ ತಾಯಿಯ ಒಲುಮೆಯಿಂದಲೇ.

### ಇಂದಿನ ಆವಶ್ಯಕತೆ

ಇಂದು ವಿಶ್ವದಲ್ಲಿ ಅತ್ಯಂತ ಅಗತ್ಯವಾಗಿ ಆಗಬೇಕಾದುದೆಂದರೆ ಮಾತೃತ್ವದ ಆದರ್ಶದ ಪ್ರಚಾರ ಹಾಗೂ ಅದನ್ನು ಕಾರ್ಯರೂಪಕ್ಕೆ ತರುವ ಪ್ರಯತ್ನ. ಜಗತ್ತಿನ ಅನೇಕ ಚಿಂತನಾಶೀಲ ವ್ಯಕ್ತಿಗಳು ಸಮಾಜದ ಏಕತೆಗೆ ಈ ಆದರ್ಶವನ್ನು ಕಾರ್ಯರೂಪಕ್ಕೆ ತರಬೇಕೆಂದು ಮತ್ತೆ ಮತ್ತೆ ಒತ್ತಿ ಹೇಳುತ್ತಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಹೀಗೆ ಹೇಳುತ್ತಾರೆ: "ಇಂದಿನ ನಮ್ಮ ಬಹು ಪ್ರಯೋಜನಗಳಲ್ಲಿ ನಮಗೆ ಈ ಕೂಡಲೇ ಬೇಕಾಗಿರುವುದು ಮಾತೃತ್ವದ ಆದರ್ಶ. ಈ ಆಧುನಿಕ ಯುಗದಲ್ಲಿ ಸಾಂಸ್ಕೃತಿಕ, ವೈಜ್ಞಾನಿಕ ಹಾಗೂ ಆರ್ಥಿಕ ಶಕ್ತಿಗಳು ವಿಭಿನ್ನ ಭೂಖಂಡಗಳ ಸ್ತ್ರೀ ಪುರುಷರನ್ನೂ, ಜನಪದಗಳನ್ನೂ, ಜಾತಿಸಂಘಗಳನ್ನೂ, ವಿಭಿನ್ನ ದೇಶಗಳನ್ನೂ ಪರಸ್ಪರ ಹತ್ತಿರಕ್ಕೆ ತಂದಿವೆ. ಇಡೀ ಪ್ರಪಂಚವೇ ತನ್ನ ಹಳೆಯ ಜೀವನ ಯಾತ್ರೆಯನ್ನು ಬಿಟ್ಟು ಹೊಸದಾಗಿ ಪುನರ್ನಿರ್ಮಾಣಗೊಳ್ಳಲು ಸಿದ್ಧವಾಗಿದೆ. ಜಗತ್ತಿನ ವಿಭಿನ್ನ ದೇಶಗಳು ಮತ್ತು ಸಂಸ್ಕೃತಿಗಳ ನಡುವೆ ಇದ್ದ ಅಂತರವು ಕಡಿಮೆಯಾಗುತ್ತಿರುವ ಈ ಯುಗದಲ್ಲಿ ಅವುಗಳೆಲ್ಲವನ್ನೂ ಒಟ್ಟುಗೂಡಿಸಿ ತರಲು ಅವಶ್ಯಕವಾದ ಐಕ್ಯತೆಯ ಶಕ್ತಿ ಎಂದರೆ ಆಂತರಿಕವಾದ ಪ್ರೇಮದ ಶಕ್ತಿ. ಈ ಶಕ್ತಿಯ ಮೂಲ ಉತ್ಪತ್ತಿಯ ಸ್ಥಾನವೇ ಮಾತೃತ್ವದ ಆದರ್ಶ."

ಇಡೀ ಕುಟುಂಬವನ್ನು ಒಟ್ಟುಗೂಡಿಸುವಂತೆ ಮಾಡಿರುವ ಶಕ್ತಿ ಅದಾವುದು? ಅದೇ ತಾಯಿಯ ಆತ್ಮೀಯತೆಯ ಶಕ್ತಿ. ತಾಯಿಯೇ ಒಂದು ಸಂಸಾರದ ಎಲ್ಲ ಸದಸ್ಯರನ್ನೂ ತನ್ನ ಸೇವೆ, ಲಾಲನೆಪಾಲನೆಗಳ ನಿಃಸ್ವಾರ್ಥ ಪ್ರೀತಿಯ ಬಂಧನದಿಂದ ಒಟ್ಟಾಗುವಂತೆ ಮಾಡುತ್ತಾಳೆ. ಒಬ್ಬ ಮಹಿಳೆ ಆದರ್ಶ ಪತ್ನಿಯಾಗಿ, ಆದರ್ಶ ಮಾತೆಯಾಗಿ, ಆದರ್ಶ ಸಮಾಜ ಸೇವಕಿಯಾಗಿ ಮತ್ತು ಆದರ್ಶ ಆಧ್ಯಾತ್ಮಿಕ ಸಾಧಕಿಯಾಗಿ ನಿಃಸ್ವಾರ್ಥ ಪ್ರೇಮದಿಂದ ಬಹುಜನರ ಶಾಂತಿನೆಮ್ಮದಿಗಳಿಗೆ ಆಧಾರಳಾಗಿ ನಿಲ್ಲಬಲ್ಲಳೆಂಬುದನ್ನು ಶ್ರೀಮಾತೆ ಶಾರದಾದೇವಿಯವರ ಜೀವನ ತೋರಿಸಿಕೊಡುತ್ತದೆ. ಅವರ ಚರಿತ್ರೆಯು ಜಗತ್ತಿನಲ್ಲಿ ಸ್ತ್ರೀಶಕ್ತಿಯ ಒಂದು ಹೊಸ ಪ್ರತೀಕವಾಗಿ ನಿಂತಿದೆ. ಆಧುನಿಕ ಮಹಿಳೆಯರು ಸಮದರ್ಶಿತ್ವ, ಪ್ರೀತಿ ಮತ್ತು ನಿಃಸ್ವಾರ್ಥ ಸೇವೆಗಳಿಂದ ಕೂಡಿದ ಶ್ರೀಮಾತೆಯ ಜೀವನದ ಆದರ್ಶದಲ್ಲಿ, ತಮ್ಮ ಜೀವನವನ್ನು ನಡೆಸಲು ಪ್ರಯತ್ನಿಸಿದರೆ ಸಾಕು. ಅಭಯ, ಆನಂದ ಮತ್ತು ಶಾಂತಿಗಳಿಂದ ಅವರ ಜೀವನ ಸಮೃದ್ಧವಾಗುತ್ತದೆ ಮಾತ್ರವಲ್ಲ, ತಮ್ಮ ನೆರೆಹೊರೆಯವರ ಜೀವನವನ್ನೂ ಶಾಂತಿ ಸಮೃದ್ಧಿಯಿಂದ ತುಂಬಿ ತುಳುಕುವಂತೆ ಅವರು ಮಾಡಬಲ್ಲರು. ಶ್ರೀಮಾತೆ ಶ್ರೀಶಾರದಾದೇವಿಯವರು ಕೃಪೆ ಮಾಡಿ ಅವರ ಆದರ್ಶಜೀವನವನ್ನು ಅನುಸರಿಸುವಂತೆ ನಮ್ಮೆಲ್ಲರಿಗೂ ಶಕ್ತಿ-ಸಾಮರ್ಥ್ಯಗಳನ್ನು ಕರುಣಿಸಲಿ. •